


| ಅತಿ ಹೆಚ್ಚು ರನ್‌ಗಳಿಸಿದವರು | |
|---|---|
| ಆಟಗಾರ | ರನ್ |
| ಸಾಹಿಬ್‌ಜಾದಾ ಫರ್ಹಾನ್ (ಪಾಕಿಸ್ತಾನ) | 383 |
| ಟಿಮ್ ಸೈಫರ್ಟ್(ನ್ಯೂಜಿಲೆಂಡ್) | 326 |
| ಸಂಜು ಸ್ಯಾಮ್ಸನ್(ಭಾರತ) | 321 |
| ಇಶಾನ್ ಕಿಶನ್(ಭಾರತ) | 317 |
| ಫಿನ್ ಆಲೆನ್(ನ್ಯೂಜಿಲೆಂಡ್) | 298 |

| ಅತಿ ಹೆಚ್ಚು ವಿಕೆಟ್ ಪಡೆದವರು | |
|---|---|
| ಆಟಗಾರ | ಪಡೆದ ವಿಕೆಟ್ |
| ಜಸ್‌ಪ್ರೀತ್ ಬೂಮ್ರಾ (ಭಾರತ) | 14 |
| ವರುಣ್ ಚಕ್ರವರ್ತಿ (ಭಾರತ) | 14 |
| ವ್ಯಾನ್‌ಶಲ್ಕ್‌ವಿಕ್ (ಅಮೆರಿಕ) | 13 |

| ಅತಿ ಹೆಚ್ಚು ಕ್ಯಾಚ್ ಹಿಡಿದವರು | |
|---|---|
| ಆಟಗಾರ | ಕ್ಯಾಚ್‌ಗಳ ಸಂಖ್ಯೆ |
| ಗ್ಲೆನ್ ಫಿಲಿಪ್ಸ್(ನ್ಯೂಜಿಲೆಂಡ್) | 11 |
| ಟಾಮ್ ಬ್ಯಾಂಟನ್(ಇಂಗ್ಲೆಂಡ್) | 10 |
| ಡರೆಲ್ ಮಿಚೆಲ್(ನ್ಯೂಜಿಲೆಂಡ್) | 8 |
| ತಿಲಕ್ ವರ್ಮಾ(ಭಾರತ) | 8 |
| ತಶಿಂಗ ಮುಸೆಕಿವಾ(ಜಿಂಬಾಬ್ವೆ) | 7 |
| ಬ್ಲೆಸಿಂಗ್ ಮುಜರ್‌ಬಾನಿ(ಜಿಂಬಾಬ್ವೆ) | 13 |
| ಆದಿಲ್ ರಶೀದ್(ಇಂಗ್ಲೆಂಡ್) | 13 |

ಆಫ್‌ಸ್ಪಿನ್‌ಬಲೆಗೆ ಬೀಳಿಸಿದರೆ ಅಭಿಷೇಕ್ ಸಲೀಸಾಗಿ ಔಟ್‌ಆಗುತ್ತಾರೆ ಎಂಬ ದಾರಿಯೊಂದನ್ನು ಕಂಡುಕೊಂಡರು. ಈ ಪ್ರಕ್ರಿಯೆಯ ನಡುವೆ ಸಂಜು ಎದುರಾಳಿಗಳಿಗೆ ಅಚ್ಚರಿಯ ಬ್ಯಾಟರ್‌ಆಗಿ ಕಾಣಿಸಿದರು. ಒಂದೇ ಒಂದು ಹೆಜ್ಜೆ ಹಿಂದೆ ಇಟ್ಟು ಅವರು ಮಾಡಿದ ಡ್ರೈವ್‌ಗಳು ಅವರ ಆತ್ಮವಿಶ್ವಾಸಕ್ಕೆ ಕನ್ನಡಿ ಹಿಡಿದವು.

## ಬೆಂಕಿ ಸೇರಿದ ಗಾಳಿ

ಸಂಜು ಬೆಂಕಿಯಂತೆ ಕಂಡರೆ, ಇನ್ನೊಂದು ತುದಿಯಲ್ಲಿ ಇಶಾನ್ ಕಿಶನ್ ಗಾಳಿಯಂತೆ ಆವರಿಸಿಕೊಂಡರು. ಅವರೂ ಟೂರ್ನಿಯಲ್ಲಿ 33 ಬೌಂಡರಿ ಹಾಗೂ 18 ಸಿಕ್ಸರ್‌ಗಳನ್ನು ಸಿಡಿಸಿದರು. ಅಭಿಷೇಕ್ ಶರ್ಮಾ ಸತತವಾಗಿ ವಿಫಲರಾದರೂ ಆ ಕೊರತೆಯನ್ನು ಸಂಜು, ಇಶಾನ್ ಜೋಡಿ ತುಂಬಿಕೊಟ್ಟಿತು.

ಫೈನಲ್‌ಪಂದ್ಯದಲ್ಲಿ ಅಭಿಷೇಕ್ ಮತ್ತೆ ತಮ್ಮ ಹಳೆಯ ದೊಡ್ಡ ಹೊಡೆತಗಳ ಆಟ ಪ್ರದರ್ಶಿಸಿ ಕೇವಲ 18 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿ, ನ್ಯೂಜಿಲೆಂಡ್‌ಕೈಯಿಂದ ಪಂದ್ಯವನ್ನು ಕಿತ್ತುಕೊಂಡರು. ಸಂಜು ಕೂಡ ಆ ಪಂದ್ಯದಲ್ಲಿ 46 ಎಸೆತಗಳಲ್ಲಿ 89 ರನ್‌ದಾಖಲಿಸಿ, ಸರಣಿ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು.

ಮೇಲ್ಪಂಕ್ತಿಯ ಆಟಗಾರರ ಯಶೋಗಾಥೆ ಹೀಗೆ ಇದ್ದರೆ, ನಡುಘಟ್ಟದಲ್ಲಿ ನಾಯಕ ಸೂರ್ಯಕುಮಾರ್ ವಿಫಲರಾದರೂ (ಯುಎಸ್‌ಎ ಎದುರಿನ ಪಂದ್ಯದಲ್ಲಿ ಭಾರತವನ್ನು ಬಚಾವು ಮಾಡಿದ್ದು ಅವರೇ ಎನ್ನುವುದೇನೋ ನಿಜ), ಹಾರ್ದಿಕ್‌ಪಾಂಡ್ಯ ಪದೇ ಪದೇ ನೆರವಿಗೆ ಬಂದರು. ಅಂತಿಮ ಓವರ್‌ಗಳಲ್ಲಿ ಶಿವಂ ದುಬೆ ತಾವೆಷ್ಟು ಸಮರ್ಥ ಎನ್ನುವುದನ್ನು ದೊಡ್ಡ ಹೊಡೆತಗಳ ಮೂಲಕ ತೋರಿಸಿದರು. ನ್ಯೂಜಿಲೆಂಡ್‌ನ ನೀಶಮ್ ಫೈನಲ್‌ಪಂದ್ಯದಲ್ಲಿ ಭಾರತದ ಪ್ರಮುಖ ಬ್ಯಾಟ್ಸ್‌ಮನ್‌ಗಳಿಗೆ ಪೆವಿಲಿಯನ್ ಹಾದಿ ತೋರಿಸಿದ್ದರು. ಆದರೂ ಅವರು ಮಾಡಿದ ಕೊನೆಯ ಓವರ್‌ನಲ್ಲಿ ದುಬೆ 22 ರನ್‌ಗಳನ್ನು ಕೊಳ್ಳೆಹೊಡೆದರು.

ಅಕ್ಷರ್‌ಪಟೇಲ್ ಬೌಲಿಂಗ್‌ನಲ್ಲಿ ಸಾಧಿಸಲು ಆಗದೇ ಇದ್ದರೆ ಬ್ಯಾಟಿಂಗ್‌ನಲ್ಲಿ ನೆರವಿಗೆ ಬಂದ ಉದಾಹರಣೆಗಳು ಈ ಹಿಂದೆ ಇದ್ದವು. ಆದರೆ, ಈ ಬಾರಿ ಅವರು ಫೀಲ್ಡಿಂಗ್‌ನಲ್ಲಿಯೂ ಮಿಂಚಿದರು. ಇಂಗ್ಲೆಂಡ್‌ನಾಯಕ ಹ್ಯಾರಿ ಬ್ರೂಕ್ ನೀಡಿದ ಕ್ಯಾಚನ್ನು ಹಿಮ್ಮುಖವಾಗಿ ಸಾಕಷ್ಟು ದೂರ ಓಡಿ ಜಿಗಿದು ಹಿಡಿದದ್ದೇ ಇದಕ್ಕೆ ಸಾಕ್ಷಿ. ಅರ್ಶದೀಪ್ ಸಿಂಗ್ ಆರಂಭದಲ್ಲಿ ಭಾರತಕ್ಕೆ ದಕ್ಕಿಸಿಕೊಡುತ್ತಿದ್ದ ಲಯವನ್ನೂ ಸ್ಮರಿಸಬೇಕು.

ವಿಶ್ವದ ಎಲ್ಲ ತಂಡಗಳಿಗಿಂತಲೂ ಈ ಮಾದರಿಯ ಕ್ರಿಕೆಟ್‌ನಲ್ಲಿ ಭಾರತವೀಗ ಅತಿ ಸಮರ್ಥ ಎಂದೇ ಅನೇಕ ಕ್ರಿಕೆಟ್‌ಪರಿಣತರು ವಿಶ್ಲೇಷಿಸಲು ದಂಡಿಯಾಗಿ ಕಾರಣಗಳು ಸಿಗುತ್ತಿವೆ. 250 ರನ್‌ಗಳಿಗೂ ಹೆಚ್ಚು ಕಲೆಹಾಕಿದರೆ, ಗುರಿ ಬೆನ್ನಟ್ಟುವ ತಂಡದ ಮೇಲೆ ಒತ್ತಡ ಹೇರಬಹುದು ಎನ್ನುವ ಭಾರತದ ತಂತ್ರವು ನಾಕ್‌ಔಟ್‌ಪಂದ್ಯಗಳಲ್ಲಿ ಸತ್ಫಲ ಕೊಟ್ಟಿತು.

2024ರ ಟ್ವೆಂಟಿ–20 ವಿಶ್ವಕಪ್‌ನಲ್ಲಿ ಭಾರತ ಚಾಂಪಿಯನ್ ಆದಾಗ ಎರಡನೇ ಅತಿ ಹೆಚ್ಚು ರನ್‌ದಾಖಲಿಸಿದ್ದ ರೋಹಿತ್ ಶರ್ಮಾ ಈಗ ತಂಡದಲ್ಲಿ ಇಲ್ಲ. ವಿರಾಟ್ ಕೊಹ್ಲಿ ಕೂಡ ಇಲ್ಲ. ಕೆ.ಎಲ್.ರಾಹುಲ್, ಶ್ರೇಯಸ್ ಅಯ್ಯರ್ ಅವರನ್ನೂ ಬದಿಗೆ ಸರಿಸಲಾಗಿದೆ. ಹೀಗಿರುವಾಗ, ಬಿಸಿರಕ್ತದ ಹುಡುಗರು ತೋರಿದ ಸಾಂಘಿಕ ಆಟವು ಭಾರತ ಕ್ರಿಕೆಟ್‌ಭವಿಷ್ಯವನ್ನು ಇನ್ನಷ್ಟು ಉಜ್ವಲವಾಗಿಸಿದೆ.

**ಕೊನೆಯ ಮಾತು:** ಈ ಸಲದ ಟ್ವೆಂಟಿ–20 ವಿಶ್ವಕಪ್‌ನಲ್ಲಿ ಒಟ್ಟು 780 ಸಿಕ್ಸರ್‌ಗಳು, 1434 ಬೌಂಡರಿಗಳು ಹೊಮ್ಮಿದವು. 2024ರ ವಿಶ್ವಕಪ್‌ನಲ್ಲಿ 517 ಸಿಕ್ಸರ್‌ಗಳು ಹಾಗೂ 961 ಬೌಂಡರಿಗಳು ದಾಖಲಾಗಿದ್ದವು. ಆಟ ಯಾವ ಸ್ತರಕ್ಕೆ ಏರಿದೆ ಎನ್ನುವುದಕ್ಕೆ ಈ ಅಂಕಿಅಂಶ ಕನ್ನಡಿ ಹಿಡಿದೀತು.